ಕೆ.ಪಿ. ರಾಮಗುಂಡಿ, ಬೈಲಹೊಂಗಲ
*ಉತ್ತರಿಸಲಾಗದ ಪ್ರಶ್ನೆ ತಮಗೆ ಬಂದಿದೆಯಾ?*



ಬಂದಿದೆ – ಕಳುಹಿಸಿದವರ ಹ್ಯಾಂಡ್‌ರೈಟಿಂಗ್ ನನಗಿರಲಿ, ಮೆಡಿಕಲ್ ಸ್ಟೋರ್‌ನವರಿಗೂ ಓದಲಾಗಲಿಲ್ಲ.

ವಿ. ಹೇಮಂತಕುಮಾರ್, ಬೆಂಗಳೂರು
*ಹೆಂಡತಿಯನ್ನು ಅಡುಗೆ ಮನೆಯ ರಾಣಿ ಎಂದು ಕರೆಯುವುದೇ ಸೂಕ್ತವಲ್ಲವೇ?*
ಜೋಡಿ ಸರಿಯಾಗಿದೆ; ಮೊನ್ನೆ ನಿಮ್ಮಾಕೆ ನಿಮ್ಮನ್ನು ರುಬ್ಬುರಾಜ್ ಎನ್ನುತ್ತಿದ್ದರಂತೆ.

ಕೆ. ರಾಮಕೃಷ್ಣಾರೆಡ್ಡಿ, ಬೆಂಗಳೂರು
*ದೇವಸ್ಥಾನ ಚಿಕ್ಕದಾಗಿದ್ದರೂ ಭಕ್ತರು ಹತ್ತುವ ಮೆಟ್ಟಿಲು ಜಾಸ್ತಿ ಇರಲು ಕಾರಣವೇನು?*
ಲೆವೆಲ್ ಮೇಯ್ನ್‌ಟೇಯ್ನ್ ಮಾಡದೇಯಿದ್ರೆ ಡಿಮ್ಯಾಂಡ್ ಕಡಿಮೆ ಆಗ್ಬೋಗತ್ತಂತೆ.

ವಿ. ಹಮೀದ್, ವಿಟ್ಲ
*ಅಮಾವಾಸ್ಯೆ ಸಂದರ್ಭದಲ್ಲಿ ಪುಣ್ಯಕ್ಷೇತ್ರಗಳಲ್ಲಿ ನದಿಯಲ್ಲಿ ಮಿಂದರೆ ಏನು ಪ್ರಾಪ್ತಿಯಾಗುತ್ತದೆ?*
ಕೊಳೆ – ನಿಮ್ಮದು – ನೀರಿಗೆ.

ಎಂ.ಎ. ಕುಮಾರ್, ಬೆಂಗಳೂರು
*ಜೀವನದಲ್ಲಿ ಅತಿ ಮೇಲೆ ಏರಿದವ ಮತ್ತೆ ಕೆಳಗೆ ಇಳಿಯುವುದಿಲ್ಲವೆ?*




ಇಳಿಯಲೇಬೇಕಲ್ಲ! ಎಷ್ಟೇ ಮೇಲೇರಿದರೂ ಕಡೆಗೆ ಆರಡಿ ಕೆಳಗೇ!

ರಮೇಶ್, ಹನುಮನಾಳು
*ಎಲ್ಲ ದೇವರ ಮೆರವಣಿಗೆಯ ಜೊತೆಯಲ್ಲಿ ಬಸವನನ್ನು ಕರೆತರುವ ಬದಲು ಹುಲಿ, ಸಿಂಹಗಳನ್ನು ಕರೆತರಬಾರದೇಕೆ?*
ಆಗದು; ಶಾಪಿಂಗ್‌ಗೇ ಆಗಲಿ, ಮೆರವಣಿಗೆಗೇ ಆಗಲಿ, ಹೇಳಿದ್ದಕ್ಕೆಲ್ಲ ಗೋಣಾಡಿಸುವ ಕೋಲೆಬಸವನೇ ಸೂಕ್ತ.

ಕುಬೇರಪ್ಪ ವಿಭೂತಿ, ಹರಿಹರ
*ಆಗ ಸ್ತ್ರೀಯರು ತಮ್ಮ ಬೆನ್ನು ಕಾಣದಂತೆ ಸೀರೆಯುಡುತ್ತಿದ್ದರು. ಈಗ ಸೀರೆಯಿದ್ದರೂ ಬೆನ್ನು ಮಾತ್ರ ಕ್ರಿಕೆಟ್ ಮೈದಾನದಂತೆ ಅಗಿದೆಯಲ್ಲಾ?*
ಲಾಂಗ್‌ಲೆಗ್, ಫೈನ್‌ಲೆಗ್, ಸಿಲ್ಲಿ ಪಾಯಿಂಟ್‌ಗಳತ್ತ ಗಮನ ಹರಿಸುವುದನ್ನು ತಪ್ಪಿಸಲು ಈ ಉಪಾಯವಂತೆ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಒಂಟಿ ಇದ್ದಾಗಲೇ ನಂಟು ಜಾಸ್ತಿಯಂತೆ. ನಿಜಾನಾ?*
ಒನ್ ಟಿ ಅಲ್ಲ, ಬೈಟೂ ಟಿ ಇದ್ದಾಗ. ಹಂಚಿಕೊಳ್ಳುವುದರಿಂದಲೇ ನಂಟಿನ ಬೆಳವಣಿಗೆ.

ಆರತಿ ಘಟಿಕಾರ್, ದುಬೈ
*ಇಲ್ಲೊಬ್ಬ ಪ್ರೇಮಿ ತಾನು ಪ್ರೀತಿಸಿದ ಹುಡುಗಿಯನ್ನಾದರೂ ಬಿಟ್ಟಿರಬಲ್ಲೆ, ಆದರೆ ಇಂಟರನಟ್ ಇಲ್ಲದೆ ಇರಲಾರೆ ಎನ್ನುವನಲ್ಲಾ...?*
ಭ್ರಮೆ! ಪ್ರೇಮಿ ಜಾಲತಾಣದಲ್ಲಿದ್ದರೇನು, ಪ್ರೇಯಸಿಗೆ ಅವನನ್ನು ಕುಣಿಸುವ ಜಾಣ ತಾಳ ತಿಳಿದಿರುತ್ತದೆ!

ಎಂ.ಎನ್. ಸೋಮಶೇಖರ್, ಮೈಸೂರು
*ತ್ರಿಲೋಕ ಸಂಚಾರಿಗಳಾದ ನಾರದರಿಗೆ ವಾಹನ ಏಕಿಲ್ಲ?*
ವಾಹನದ ಏರಿ ಎರಡೂ ಕೈಯಲ್ಲಿ ತಂಬೂರಿ ಮೀಟುತ್ತಾ ಡ್ರೈವ್ ಮಾಡಲು ಸಾಧ್ಯವಾಗದ್ದರಿಂದ.

ಎಸ್.ಜಿ. ಕರನಂದಿ, ಹುನಗುಂದ
*ನಮ್ಮ ಬದುಕಿನಲ್ಲಿ ಸತ್ಯದ ಪಾತ್ರ ಎಷ್ಟು?*
ಹುಟ್ಟಿದಾಗಲೇ 'ಜನನಿ'ಯಲ್ಲಿ 'ನಿಜ'ರೂಪ ದೊರೆತು, ಸತ್ತನಂತರದ 'ರಾಮ್ ನಾಮ್ ಸತ್ಯ ಹೈ'ವರೆಗೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಆಟೋ ಡ್ರೈವರ್‌ಗೂ, ಶಾಲೆಯ ಶಿಕ್ಷಕನಿಗೂ ಏನು ವ್ಯತ್ಯಾಸ?*
ಶಿಳ್ಳೆ ಹೊಡೆದರೆ ಒಬ್ಬರು ವಾಹನ ನಿಲ್ಲಿಸುತ್ತಾರೆ; ಒಬ್ಬರು ಬೆಂಚ್ ಮೇಲೆ ನಿಲ್ಲಿಸುತ್ತಾರೆ.

ಟಿ.ಎಂ. ಮಾನಪ್ಪ, ಶಿವಮೊಗ್ಗ
*ಕಾಂಚಾಣ ಕುರುಡು ಹೇಗಾಯ್ತು?*
ತಿಜೋರಿ, ಪರ್ಸು, ಪೆಟ್ಟಿಗೆಗಳ ಕತ್ತಲೆಯಲ್ಲೇ ಇದ್ದೂ ಇದ್ದೂ.....

## ಬಹುಮಾನಿತ ಪ್ರಶ್ನೆ

ಪಿ.ಜಿ. ರಾಘವೇಂದ್ರ, ಮೈಸೂರು
*ತಾಳಿ ಕಟ್ಟುವಾಗ 3 ಗಂಟು ಹಾಕುತ್ತಾರೆ. ನಂತರ ತೊಡುವ ಮಾಂಗಲ್ಯ ಸರದಲ್ಲಿ ಗಂಟೇ ಇರುವುದಿಲ್ಲವಲ್ಲ ರಾಮಣ್ಣಾ?*
ಅಷ್ಟುಹೊತ್ತಿಗೆ ಹೆಣ್ಣು ಕೊಕ್ಕೆ ಹಾಕುವುದನ್ನು ಕಲಿತಿರುತ್ತಾಳಲ್ಲ!

ಕುಮಾರ ಚಲವಾದಿ ಹೊಳೆನರಸಿಪುರ
*ವಿಜ್ಞಾನ ಮತ್ತು ಅಧ್ಯಾತ್ಮ ಒಂದಕ್ಕೊಂದು ಹೇಗಿರಬೇಕು?*
ಸಕ್ಕರೆಬಾದಾಮಿಯ ಪದರಗಳಂತೆ; ವ್ಯಕ್ತವಾಗುವ ಹೊರಕವಚ ವಿಜ್ಞಾನ; ಚಿಪ್ಪಿನಲ್ಲಡಗಿರುವ ಬಾದಾಮಿ ಅಧ್ಯಾತ್ಮ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
*ಹೆಣ್ಣಿನ ಹೃದಯ ಮತ್ತು ಹವಾಮಾನ ಏಕಾಏಕಿ ಬದಲಾಗಲು ಕಾರಣವೇನು?*
ಸರವೇ ಕಾರಣ – ಸರ, ಅವಸರ, ಮತ್ಸರ, ನೇಸರ, ಮರುತದ ಸರಸರ, ಸಂವತ್ಸರ......

ಕೆ.ಎಂ. ಲಿಂಗರಾಜು, ನಂಜನಗೂಡು
*ಕೈಗಡಿಯಾರ ಧರಿಸುವವರೆಲ್ಲರೂ ಸಮಯ ಪಾಲನೆ ಮಾಡುವರೆ?*



ಕಾವಿ ಧರಿಸಿದವರೆಲ್ಲ ಸಂಯಮ ಪಾಲಿಸುವರೆ? ಧಾರಣೆಯೇ ಬೇರೆ, ಧೋರಣೆಯೇ ಬೇರೆ.

ಆರ್. ಮಧುಸೂದನ್, ಹಾಸನ
*ಸೆಲ್ಫಿದಂಡಶ್ಚ ವಾಕಿಂಗ್ ದಂಡಯೋರ್ಮಧ್ಯೆ ಕೋ ಬೇಧಃ ಗುರುವರ್ಯ?*
ಬಾಗಿದವನಿಗೊಂದು, ಬೀಗಿದವನಿಗೊಂದು.

ಜೆ.ಸಿ. ರವಿಕುಮಾರ್, ಜಯಸುವರ್ಣಪುರ
*ಎಲ್ಲ ಭಯಗಳಿಗಿಂತ ಸಂಸಾರಭಯ ದೊಡ್ಡದು. ಏಕೆ?*
ಗುಡುಗು, ಸಿಡಿಲು, ಶೀತಲ ವಾತಾವರಣ, ಸುನಾಮಿಗಳನ್ನು ಹೋಗಲಾಡಿಸುವ ಔಷಧಿ ಇಲ್ಲವಲ್ಲ!

■ ರಾಮ್